ಆ) ತುಮಕೂರು ಜಿಲ್ಲೆಯ ಸಹಕಾರಿ ಸಂಘ(ಬ್ಯಾಂಕ್)ನಲ್ಲಿ ಅವಶ್ಯಕತೆಗಿಂತ ಹೆಚ್ಚಿನ ಸಿಬ್ಬಂದಿಯಿರುವುದು ನಿಜವೆ; ನೇಮಕಾತಿಯಲ್ಲಿ ರೋಸ್ಟರ್ ಪದ್ಧತಿ ಅಳವಡಿಸಲಾಗಿದೆಯೆ;

ಇ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ ದಿನಾಂಕ: 31.3.2002ರ ಅಂತ್ಯಕ್ಕೆ ಒಟ್ಟು 30,862 ಸಹಕಾರಿ ಸಂಸ್ಥೆಗಳು ನೋಂದಣಿಯಾಗಿರುತ್ತವೆ. ಅವುಗಳಲ್ಲಿ 15,648 ಸಂಸ್ಥೆಗಳು ಲಾಭದಲ್ಲಿದ್ದು, 12,756 ಸಂಸ್ಥೆಗಳು ನಷ್ಟದಲ್ಲಿವೆ, 2,458 ಸಂಸ್ಥೆಗಳು ಲಾಭ:ನಷ್ಟ ಇಲ್ಲದೆ ಕಾರ್ಯನಿರ್ವಹಿಸುತ್ತಿವೆ.

ಆ) ಇಲ್ಲ, ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ಮಂಜೂರಾಗಿರುವ ಸಿಬ್ಬಂದಿ ವೃಂದ ಬಲ 180 ಇದ್ದು, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ 156 ಆಗಿರುತ್ತದೆ. ನೇಮಕಾತಿಯಲ್ಲಿ ರೋಸ್ಟರ್ ಪದ್ಧತಿ ಅಳವಡಿಸಲಾಗುತ್ತಿದೆ.

ಇ) ಅನ್ವಯಿಸುವುದಿಲ್ಲ.

ಮೈಸೂರು ಎ.ಪಿ.ಎಂ.ಸಿ ವ್ಯಾಪ್ತಿಯಲ್ಲಿ ರೈತ ಬಜಾರ್ ಪ್ರಾರಂಭಿಸುವುದು

3176 (4194) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಲ್ಲಿ ರೈತ ಬಜಾರ್ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಹೌದಾದರೆ, ಯಾವಾಗ ಪ್ರಾರಂಭಿಸಲಾಗುವುದು;

ಆ) ಈ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಬಜೆಟ್ ಅಂದಾಜು ವೆಚ್ಚ ಎಷ್ಟು;

ಇ) ರೈತ ಬಜಾರ್ ಸ್ಥಾಪನೆಯಿಂದ ನೇರವಾಗಿ ಉತ್ಪನ್ನಗಳು ಗ್ರಾಹಕರಿಗೆ ತಲುಪುವ ಕಾರಣ ರೈತರ ಶೋಷಣೆ ತಪ್ಪುತ್ತದೆ ಎಂಬುದು ನಿಜವೇ; ಹೌದಾದರೆ, ಯಾವಾಗಿನಿಂದ ಜಾರಿಗೆ ತರಲಾಗುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು

ಆ) ರಾಜ್ಯದಲ್ಲಿನ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ರೈತರ ಸಂತೆ ಸ್ಥಾಪಿಸುವ ಸಂಬಂಧ ಕಾರ್ಯಸಾಧ್ಯತೆ ವರದಿ ನೀಡಲು ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಮತ್ತು ಧಾರವಾಡ ಇವರಿಗೆ ವಹಿಸಲಾಗಿದೆ. ಸದರಿಯವರಿಂದ ಬರುವ ವರದಿ ಪರಿಶೀಲಿಸಿ, ರೈತರ ಸಂತೆ ಸ್ಥಾಪನೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ಕೃಷಿ ಕೈಗಾರಿಕಾ ನಿಗಮದ ವತಿಯಿಂದ ಯಾಂತ್ರಿಕತೆ ಗೊಬ್ಬರ ಮಿಶ್ರಣ ಯಂತ್ರ ಸ್ಥಾಪನೆ

3177 (4197) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರು ಸ್ಥಾಪಿಸಲು ಉದ್ದೇಶಿಸಿದ್ದು ಯಾಂತ್ರೀಕೃತ ಗೊಬ್ಬರ ಮಿಶ್ರಣ ಘಟಕವನ್ನು ಕೈಬಿಟ್ಟಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ರೀತಿ ಕ್ರಮ ಕೈಗೊಳ್ಳಲು ಕಾರಣ ಯಾರು ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ; ಅವರಿಂದ ಎಷ್ಟು ಹಣ ವಸೂಲಿ ಮಾಡಲಾಗಿದೆ.

ಇ) ಕೇಂದ್ರ ಸರ್ಕಾರ ಪ್ರತಿಬಂಧನೆ ವಿಧಿಸಿದ್ದಾಗ್ಯೂ ಸಹಾ ಈ ರೀತಿಯ ಘಟಕ ಸ್ಥಾಪನೆಗೆ ಕಾರಣ ಯಾರು; ಅನಗತ್ಯ ವೆಚ್ಚ ಎಷ್ಟು.

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಇ) ಕೇಂದ್ರ ಸರ್ಕಾರವು ವಿಧಿಸಿದ್ದ ಪ್ರತಿಬಂಧನೆಗಳನ್ನು ಪರಿಶೀಲಿಸಿದ ನಂತರ ಈ ಘಟಕವನ್ನು ಸ್ಥಾಪಿಸಿದ್ದು, ಈ ಘಟಕದಲ್ಲಿ ಈಗ ಅಗ್ರಿಗೋಲ್ಡ್ ಎಂಬ ಹರಳು ರೂಪದ ಸಾವಯವ ಗೊಬ್ಬರವನ್ನು ಉತ್ಪಾದಿಸಲಾಗುತ್ತದೆ. ಸದರಿ ಗೊಬ್ಬರವು ಉತ್ಪಾದನೆ ಹಾಗೂ ಮಾರಾಟದಲ್ಲಿ ಉತ್ತಮ ಲಾಭಾಂಶವನ್ನು ಹೊಂದಿರುತ್ತದೆ.

ಮೈಸೂರು ಜಿಲ್ಲೆಯಲ್ಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಎನ್.ಜಿ.ಓ.ಗಳ ಪಾತ್ರ

3178 (4198) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವ ಸರ್ಕಾರೇತರ ಸಂಸ್ಥೆಗಳು ಎಷ್ಟು? ಅವು ಯಾವುವು

ಆ) ಈ ಸಂಸ್ಥೆಗಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಸಹಾಯಧನ ಎಷ್ಟು? ಕಳೆದ ಮೂರು ವರ್ಷಗಳ ಸಂಸ್ಥೆವಾರು ಮತ್ತು ಸಹಾಯಧನವಾರು ಪಟ್ಟಿ ಕೊಡುವುದು

ಇ) ಈ ಎಲ್ಲಾ ಮೊಬಲಗಿಗೆ ಬಳಕೆ ಪ್ರಮಾಣ ಪತ್ರ ಸಲ್ಲಿಸಲಾಗಿದೆಯೇ? ಎಲ್ಲಾ ರೀತಿಯ ವೆಚ್ಚಕ್ಕೆ ಆಡಿಟ್ ವರದಿ ಸಲ್ಲಿಸಲಾಗಿದೆಯೇ? ಲೋಪವಾಗಿದ್ದರೆ ಕೈಗೊಂಡಿರುವ ಕ್ರಮವೇನು?

ಈ) ಈ ಸಂಸ್ಥೆಗಳಿಗೆ ಹರಿದುಬರುತ್ತಿರುವ ಹೊರ ದೇಶದ ಸಹಾಯದನವೆಷ್ಟು? ಇದಕ್ಕೆ ನಿಗದಿಪಡಿಸಿರುವ ವಿದೇಶಿ ವಿನಿಮಯ ಧನವೆಷ್ಟು? ವಿದೇಶಿ ವಿನಿಮಯ ಉಲ್ಲಂಘನೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಹೌದಾದರೆ ಅದರ ಪ್ರಮಾಣ ಎಷ್ಟು

ಉ) ಈ ಸಂಸ್ಥೆಗಳಿಗೆ ಸರ್ಕಾರದಿಂದ ನೀಡಲಾಗಿರುವ ವಿನಾಯಿತಿಗಳೆಷ್ಟು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಮೈಸೂರು ಜಿಲ್ಲೆಯಲ್ಲಿ ಒಟ್ಟು 21 ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನೆಯ ಅನುಷ್ಠಾನದಲ್ಲಿ ತೊಡಗಿವೆ. ಸಂಸ್ಥೆಗಳ ವಿವರಗಳ ಪಟ್ಟಿ ಲಗತ್ತಿಸಿದೆ.

ಆ) ಸರ್ಕಾರದಿಂದ ನೀಡಲಾಗುತ್ತಿರುವ ಸಹಾಯಧನದ ವಿವರಗಳು ಮತ್ತು ಕಳೆದ ಮೂರು ವರ್ಷಗಳಲ್ಲಿ ಸಂಸ್ಥೆವಾರು ಮತ್ತು ಸಹಾಯಧನವಾರು ಪಟ್ಟಿಯನ್ನು ಲಗತ್ತಿಸಿದೆ.

ಇ) ಸಲ್ಲಿಸಲಾಗಿದೆ.

ಸಲ್ಲಿಸಲಾಗಿದೆ.

ಲೋಪವಾಗಿರುವುದಿಲ್ಲ.